ವಿಧಾನಪರಿಷತ್ತಿನ ಸದಸ್ಯರನ್ನು ಒಳಗೊಂಡ ಜಂಟಿ ಸದನದ ಸಮಿತಿಯನ್ನು ನೇಮಕ ಮಾಡಿರುವ ಬಗ್ಗೆ ದಿ:25-8-95 ರಂದು ಈ ಸದನದಲ್ಲಿ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ದಿ:31-8-95 ರಂದು ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದ ಪ್ರಕಾರ ವಿಧಾನಪರಿಷತ್ತಿನ 6 ಜನ ಸದಸ್ಯರನ್ನು ಈ ಜಂಟಿ ಸದನ ಸಮಿತಿಗೆ ನೇಮಕ ಮಾಡಲಾಗಿರುವುದರಿಂದ ಈ ಮೇಲ್ಕಂಡ ಸಮಿತಿಯಲ್ಲಿ ಒಟ್ಟು 15 ಜನ ವಿಧಾನಸಭಾ ಸದಸ್ಯರು ಹಾಗೂ 6 ಜನ ವಿಧಾನಪರಿಷತ್ತಿನ ಸದಸ್ಯರಿರುವ ಜಂಟಿ ಸದನದ ಸಮಿತಿಯ ರಚನೆಗೆ ಸದನ ಒಪ್ಪಿಗೆ ನೀಡುವುದು ಎಂದು ಭಾವಿಸುತ್ತೇನೆ.

+ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೆ, ಕಾವೇರಿ ನೀರಿನ ವಿಷಯದಲ್ಲಿ ಚರ್ಚೆಯಾಗಿದೆ, ಉತ್ತರ ಆಗಿದೆ. ಧರಣಿ ನಡೆಯುತ್ತಿದೆ. ಸದನದ ಧರಣಿ ಕಲಾಪಗಳಿಗೆ ಆಭರಣವೇನು ಅಲ್ಲ. ನಮ್ಮ ಅನಿಸಿಕೆಗಳನ್ನು ನಾವು ಆಯಾ ಪಕ್ಷಕ್ಕೆ ಸೇರಿದಂತಹ ಮಾನ್ಯ ಮಿತ್ರರು ಆಡಿದ್ದಾರೆ. ಎಲ್ಲರ ಗುರಿ ಒಂದೇ ಆಗಿದೆ. ರಾಜ್ಯದ ರೈತರ ಅಥವಾ ರಾಜ್ಯದ ಹಿತವನ್ನು ರಕ್ಷಣೆ ಮಾಡುವಂತಹ ಮೂಲ ಸದುದ್ದೇಶ ಬಿಟ್ಟರೆ ಮತ್ತೆ ಬೇರೆ ಉದ್ದೇಶ ಇದಕ್ಕೆ ಇರುವುದಕ್ಕೆ ಸಾಧ್ಯವೇ ಇಲ್ಲ, ಎಷ್ಟೇ ವಾಖ್ಯಾನ ಮಾಡಿದರೂ ರಾಜಕೀಯ ಹೆಸರನ್ನು ಹೇಳಿಕೊಂಡು ಬೇಕಾದವರು ಬೇಕಾದಷ್ಟು ಮಾಡಿಕೊಳ್ಳಲಿ, ರಾಜ್ಯದ ಹಿತ ಅತಿ ಮುಖ್ಯ ಎನ್ನತಕ್ಕಂಥದ್ದನ್ನು ಮರೆಯುವುದಕ್ಕೆ ಆಗುವುದಿಲ್ಲ. ಹಿಂದೆಯೂ ಕೂಡ ಇಂತಹ ಘಟನೆಗಳು ನಡೆದಿದೆ, ನಡೆದಿಲ್ಲ ಎನ್ನುವಂತಹ ಮಾತನ್ನು ನಾನು ಹೇಳುವುದಿಲ್ಲ, ಅದಕ್ಕೆ ದಾಖಲೆಗಳು ಇವೆ. ರಾಜ್ಯದ ಹಿತದೃಷ್ಟಿಯಿಂದ ಆ ರೀತಿ ನಡೆದಾಗ ಪ್ರಜಾಪ್ರಭುತ್ವದ ಸಂಪ್ರದಾಯ ಅಥವಾ ಪದ್ಧತಿ, ನಾವು ಇಟ್ಟಿರುವಂತಹ ನಂಬಿಕೆಗೆ ಸಾಕ್ಷಿಯಾಗಿ ಎಷ್ಟೊ ಸಾರಿ ಹಿಂದೆ ಮಾತುಕತೆಗಳ ಮುಖಾಂತರ ಇದನ್ನೆಲ್ಲಾ ಬಗೆಹರಿಸಿಕೊಂಡ ಪ್ರಕರಣಗಳು ಇದೆ. ಆದುದರಿಂದ ಈ ಸಂದರ್ಬದಲ್ಲಿ ಒಂದು ಸಲಹೆ ಮಾನ್ಯ ಸಭಾಧ್ಯಕ್ಷರು ಇದನ್ನು ಒಪ್ಪುವುದಾದರೆ, ಏಕೆಂದರೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಅದು ಅನಿವಾರ್ಯವೆನ್ನುವಂತಹ ದೃಷ್ಟಿಯಿಂದ ಅವರು ಅಭಿಪ್ರಾಯವನ್ನು ಕೊಟ್ಟರೂ ಕೂಡ ಅದಕ್ಕೆ ವಿಭಿನ್ನವಾದಂತಹ ಅಭಿಪ್ರಾಯವನ್ನು ನಾನು ಕೊಡುತ್ತಿದ್ದೇನೆ. ಸರ್ಕಾರ ಮತ್ತು ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಅಧ್ಯಕ್ಷತೆಯಲ್ಲಿ ಮಾತುಕತೆ ಮಾಡಿದಂತಹ ಸಂದರ್ಭಗಳು ಇವೆ. ಈ ಸದನದ ಒಳಗಡೆ ಆಗಲಿ, ಹೊರಗಡೆ ಕೂಡ ನಡೆದಿದೆ ಅದಕ್ಕೆ ನಾನು ಇವತ್ತು ಮಾತನಾಡಿದಂತಹ ಸಂದರ್ಭದಲ್ಲಿ ಹೇಳಿದೆ. ನಿನ್ನೆ ಕೂಡ ಹೇಳಿದೆ. ಎಲ್ಲಾ ಕಲಾಪಗಳು ಕೂಡ ಕಾವೇರಿ ಜಲವಿವಾದ ವಿಚಾರದಲ್ಲಿ ಸದನದಲ್ಲಿ ನೋಡುವುದಕ್ಕೆ ಬರುವುದಿಲ್ಲ, ಮಾಡಬಾರದು ಎನ್ನತಕ್ಕಂಥದ್ದು ಎಲ್ಲರ ನಿಲುವು ಕೂಡ ಹೌದು ಅವುಗಳನ್ನು ಖಾಸಗಿಯಾಗಿ ತಮ್ಮಲ್ಲಿ ಮಾತನಾಡುವುದಕ್ಕೆ ಬರುತ್ತದೆ. ಈಗ ರಾಜ್ಯದ ಹಿತವನ್ನು ಕಾಪಾಡಬೇಕೆಂಬ ಉದ್ದೇಶವಿದ್ದರೆ ಮಾತುಕತೆಯ ಮುಖಾಂತರ ಅಭಿಪ್ರಾಯ ಒಕವಾಗಿ ಇರಬೇಕಾದರೆ ಮಾತುಕತೆ ಒಂದು ಅನಿವಾರ್ಯವಾಗಿರುವಂಥ ನಾವು ನಂಬಿಕೊಂಡು ಬಂದಿರುವಂತಹ ಬಂದು ಪದ್ಧತಿಯಾಗಿ ಉಳಿಸಿಕೊಂಡು ಬಂದಿದೆ. ಅದನ್ನು ಮುಂದುವರೆಸಿಕೊಂಡು ಹೋಗುವುದು ಒಳ್ಳೆಯದು. ನನ್ನ ಸಲಹೆ ಇಷ್ಟೆ ಅವರು ಬೇರೆ ಕಡೆ ಭಾಷಣಕ್ಕೆ ಹೋಗಿದ್ದಾರೆ ಎಂಬ ಮಾತನ್ನಾಗಲಿ, ಕಾರಣವನ್ನಾಗಲಿ ನಾನು ಕೊಡಲಾರೆ, ನಾನು ಆ ಪಾಯಿಂಟ್ ಹೇಳುತ್ತಾ ಇಲ್ಲ, ಇವತ್ತು ಧರಣಿ ಕುಳಿತಿರುವಂತಹ ಮಿತ್ರರು ಏನಿದ್ದಾರೆ, ನಾವು ಅನುಭವಸ್ಥರು The House is in order, we can take up rest of the business as per the agenda..ಎನ್ನುವಂತಹ ಮಾತನ್ನು ಆಡಿದರೂ ಕೂಡ ನಾನು ವಿಷಯದ ಗಹನತೆಯನ್ನು ಈ ಕಾವೇರಿ ನೀರಿನ ವಿಚಾರದಲ್ಲಿ ಅನುಸರಿಸಿ ನಾನು ಸಲಹೆಯನ್ನು ಕೊಡುತ್ತಿದ್ದೇನೆ. ಸದನವನ್ನು ಸ್ವಲ್ಪ ಮುಂದಕ್ಕೆ ಹಾಕಿ ನಾಳೆ ಬೆಳಿಗ್ಗೆ ಸೇರುವ ಹಾಗೆ ಮಾಡಬಹುದು. ಅಷ್ಟರಲ್ಲಿ ಸರ್ಕಾರ ಮಾತುಕತೆಗೆ

ಸಿದ್ಧವಾಗಿ, ನೀವು ಇಷ್ಟವೆಂದು ನಾನು ಹೇಳುತ್ತಾ ಇಲ್ಲ. ಎಲ್ಲರನ್ನು ಕೂಡ ಆಮಂತ್ರಣ ಮಾಡಿಕೊಂಡು ಮಾತುಕತೆ ಮಾಡಿ ವಿಚಾರ ವಿನಿಮಯ ಮಾಡಿಕೊಳ್ಳುವಂಥ ಒಂದು ವಾತಾವರಣ ಅಥವಾ ಪರಿಸರ ಸೃಷ್ಟಿಯನ್ನು ಈ ಸಂದರ್ಭದಲ್ಲಿ ನಾವು ಮಾಡಿಕೊಳ್ಳಬೇಕು. ಈ ಸಲಹೆಯನ್ನು ನಾನು ಕೊಡುತ್ತೇನೆ. ಇದಕ್ಕೆ ಅನುವು ಆಗುವ ರೀತಿಯಲ್ಲಿ ಮಾನ್ಯ ಅಧ್ಯಕ್ಷರು ಸದನವನ್ನು ಮುಂದಕ್ಕೆ ಹಾಕಿ ನಾಳೆ ಸೇರುವುದಕ್ಕೆ ಅನುವು ಮಾಡಿಕೊಟ್ಟರೆ ಆಸ್ಪತ್ರೆಗೆ ಸಂಬಂಧಪಟ್ಟ ಮುಖಂಡರುಗಳನ್ನು ಸಂಪರ್ಕ ಮಾಡಿ ಮಾತುಕತೆಗೆ ನಾವು ಕುಳಿತುಕೊಳ್ಳುವಂತಹ ಒಂದು ಸಂದರ್ಭ ತಂದು ಕೊಟ್ಟರೆ ಬಹಳ ಒಳ್ಳೆಯದು ಎನ್ನುವುದು ಸಲಹೆಯಾಗಿದೆ. ಸಭಾಧ್ಯಕ್ಷರು ಇದನ್ನು ಮಾನ್ಯತೆ ಮಾಡಿದರೆ ಸದನವನ್ನು ಮುಂದಕ್ಕೆ ಹಾಕಬೇಕಾಗುತ್ತದೆ. ಇಲ್ಲದಿದ್ದರೆ ಅನಿವಾರ್ಯವಾಗಿ the House is in order, not in order, ಎಂಬ ವಿಚಾರವನ್ನು ತೆಗೆಯಿಕೊಂಡು as per the agenda you will have to take up the business, sir., ಇದು ಬಹಳ ಕಷ್ಟವಾಗಬಹುದು ಮತ್ತು ಅಷ್ಟು ಸರಿಯಾಗಲಾರದು. ಅದಕ್ಕಾಗಿ ಈ ವಿಚಾರವನ್ನು ಇತ್ಯರ್ಥ ಮಾಡಿಕೊಳ್ಳೋಣ. ಅಭಿಪ್ರಾಯ ವಿಭಿನ್ನವಾಗಿ ನೀರು ಬಿಡುವಂತಹ ವಿಚಾರದಲ್ಲಿ ಮಾತ್ರ ಉದ್ಭವಾಗಿದೆ. ಮುಂದಕ್ಕೆ ನೀರನ್ನು ಬಿಡಬಾರದೆಂದು ಸರ್ಕಾರದಿಂದ ನಿರೀಕ್ಷೆ ಮಾಡುತ್ತವೆ ಪಕ್ಷಗಳು ಅಥವಾ ಮಾನ್ಯ ಮಿತ್ರರು ನನ್ನ ಪಕ್ಷದ ಆದಿಯಾಗಿ ಈ ಮಾತನ್ನು ಆಡುತ್ತಿದ್ದೇನೆ. There is nothing wrong in it. ಆದುದರಿಂದ ಮಾತುಕತೆಯ ಅನುಕೂಲವಾಗುವಂತೆ ಸದನವನ್ನು ಮುಂದಕ್ಕೆ ಹಾಕಿದರೆ ನಾಳೆ ಸೇರುವುದಕ್ಕೆ ಅನುಕೂಲವಾದರೆ ಒಳ್ಳೆಯದೆಂದು ನನ್ನ ಸಲಹೆಯಾಗಿದೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಈಗಾಗಲೆ ಬಹಳ ಜನ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಮಾನ್ಯ ಬಂಗಾರಪ್ಪನವರು ಸಹ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿ ಅವರು ಸರ್ಕಾರದ ಪರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಮುಕ್ತವಾಗಿ ಮಾತನಾಡತಕ್ಕದ್ದು ರಾಜ್ಯದ ಹಿತದೃಷ್ಟಿಯಿಂದ ಸರಿಯಲ್ಲ ಎಂಬ ಮಾತನ್ನೂ ಸಹ ಹೇಳಿದ್ದಾರೆ. ಈ ಬಗ್ಗೆ ತಮ್ಮಲ್ಲೂ ಅವರು ವಿನಂತಿಸಿಕೊಂಡಿರುತ್ತಾರೆ. ತಮ್ಮ ಕಛೇರಿಯಲ್ಲಿ, ಲಭ್ಯವಿರತಕ್ಕ ಎಲ್ಲಾ ದಾಖಲೆಗಳನ್ನೂ ಸನ್ಮಾನ್ಯ ಸದಸ್ಯರುಗಳಿಗೆ ಹಾಗೂ ಮಾನ್ಯ ಮುಖಂಡರುಗಳಿಗೆ ಒದಗಿಸುವುದರ ಜೊತೆಗೆ, ಅಲ್ಲಿ ಎಲ್ಲಿರಿಗೂ ಮುಕ್ತವಾಗಿ ಮಾತನಾಡತಕ್ಕ ಒಂದು ಅವಕಾಶವನ್ನು ಕಲ್ಪಿಸಿಕೊಡಲು ಸರ್ಕಾರ ತಯಾರಿದೆ ಎನ್ನತಕ್ಕ ಮಾತನ್ನೂ ಸಹ ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಅವರಿಗೆ ಇನ್ನೂ ಏನಾದರೂ ಆ ಬಗ್ಗೆ ಅನುಮಾನಗಳು ಇದ್ದರೆ, ತಾವು ಆ ಅಭಿಪ್ರಾಯಕ್ಕೆ ಬರುವುದಾದರೆ, ಅದು ತಮಗೆ ಬಿಟ್ಟಿರತಕ್ಕ ವಿಚಾರ. ತಮ್ಮ ಆದೇಶಾನುಸಾರ ನಿಗದಿಪಡಿಸಿದಂತಹ ರೀತಿಯಲ್ಲಿ ನಡೆದುಕೊಳ್ಳುವುದಕ್ಕೆ ಸರ್ಕಾರ ತಯಾರಿದೆ. ಈ ಒಂದು ಅವಕಾಶವನ್ನು ಸನ್ಮಾನ್ಯ ಸದಸ್ಯರೆಲ್ಲರೂ ದಯವಿಟ್ಟು ಉಪಯೋಗಿಸಿಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಈ ವಿಧಾನ ಸಭಾ ಅಧಿವೇಶನ ಪ್ರಾರಂಭವಾದಾಗಿನಿಂದ ಒಂದಲ್ಲ ಒಂದು ರೀತಿಯಿಂದ ಕಲಾಪಗಳು ಯಾವ ರೀತಿ ನಡೆಯುತ್ತಿವೆ ಎನ್ನತಕ್ಕದ್ದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗವುದಿಲ್ಲ. ನನಗೆ ಗೊತ್ತಿರುವಂತೆ ಒಂದು ದಿವಸ ವಿಧಾನ ಸಭೆ ಅಧಿವೇಶನ ನಡೆಯಬೇಕಾದರೆ ಸುಮಾರು ಎಂಟು ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಇದನ್ನು ನಾವೆಲ್ಲರೂ ಕೂಡ ಗಮನಿಸಬೇಕಾಗುತ್ತದೆ. ರಾಜ್ಯದಲ್ಲಿ ಕೆಲವೆಡೆ ಮಳೆಯ ವೈಫಲ್ಯದಿಂದಾಗಿ ಉಂಟಾಗಿರತಕ್ಕ

ಬರಗಾಲ ಪರಿಸ್ಥಿತಿಯ ಬಗ್ಗೆ ಸದನದಲ್ಲಿ ಚರ್ಚಿಸಬೇಕಾಗಿರುವುದೂ ಕೂಡ ಪ್ರಾಮುಖ್ಯವಾಗಿರತಕ್ಕ ವಿಚಾರ. ಬರ ಪರಿಹಾರಕ್ಕಾಗಿ ಸರ್ಕಾರ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ, ಅದರಲ್ಲಿರತಕ್ಕ ಲೋಪದೋಷಗಳ ಬಗ್ಗೆ ಚರ್ಚಿಸತಕ್ಕ ತಮ್ಮ ಹಕ್ಕನ್ನೂ ಕೂಡ ನೀವು ಚಲಾಯಿಸಬೇಕಾಗಿದೆ. ಒಂದು ಭಾಗದ ರೈತರಿಗೆ ಆಗಿರತಕ್ಕಂತಹ ತೊಂದರೆಯ ಬಗ್ಗೆ ಮಾತ್ರ ಇವತ್ತು ಚರ್ಚೆಯಾಗುತ್ತಿದೆ. ಆದರೆ ರಾಜ್ಯಾದ್ಯಂತ ಇವತ್ತು ಏನು ಪರಿಸ್ಥಿತಿ ಇದೆ ಎಂಬ ಬಗ್ಗೆ ಕೂಡ ಚರ್ಚೆಯಾಗಬೇಕಾಗುತ್ತದೆ. ಆ ಭಾಗಗಳಿಂದ ಬಂದಿರತಕ್ಕ ಮಾನ್ಯ ಸದಸ್ಯರುಗಳು ಅವರ ಅಭಿಪ್ರಾಯಗಳನ್ನೂ ಸಹ ವ್ಯಕ್ತ ಪಡಿಸಬೇಕಾಗುತ್ತದೆ. ಇಂತಹ ಒಂದು ಮುಖ್ಯವಾದಂತಹ ವಿಚಾರ ಕೂಡ ಇವತ್ತು ಸದನದ ಮುಂದಿದೆ. ಬರಗಾಲದ ವಿಚಾರ ಕೂಡ ಇವತ್ತು ಸದನದಲ್ಲಿ ಚರ್ಚೆಯಾಗುತ್ತಿಲ್ಲ. ಅದಿನ್ನೂ ಅರ್ಧದಲ್ಲೇ ನಿಂತಿದೆ. ಇದನ್ನೆಲ್ಲಾ ಗಮನಿಸ ಮಾನ್ಯ ಸದಸ್ಯರುಗಳು ಇವತ್ತು ಒಂದು ತೀರ್ಮಾನಕ್ಕೆ ಬಂದಿದ್ದರೆ ಚೆನ್ನಾಗಿ ಇರುತ್ತಿತ್ತು. ನಾನು ಈ ವಿಚಾರದಲ್ಲಿ ಮುಂದಕ್ಕೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಯಾವ ಉದ್ದೇಶದಿಂದ, ಏಕೆ ಹೀಗಾಗುತ್ತಿದೆ ಎನ್ನತಕ್ಕದ್ದನ್ನು ನಾನು ಈ ಹಂತದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸಂದರ್ಭ ಬಂದಾಗ ಅದನ್ನು ನೋಡಿಕೊಳ್ಳೋಣ. ಮಾನ್ಯ ಅಧ್ಯಕ್ಷರು ಒಂದು ಮಾತನ್ನು ದಯವಿಟ್ಟು ಗಮನಿಸಬೇಕು. ಇವತ್ತು ರಾಜ್ಯದಿಂದ ತಮಿಳುನಾಡಿಗೆ ನೀರು ಬಿಟ್ಟಾಗಿದೆ. ನೀರು ಬಿಟ್ಟಿಲ್ಲವೆಂದು ನಾವೇನೂ ಹೇಳಿಲ್ಲ. ನೀರನ್ನು ಬಿಟ್ಟಿದ್ದೂ ಆಯಿತು, ನಿಲ್ಲಿಸಿದ್ದೂ ಸಹ ಆಯಿತು. ಒಂದು ಹನಿ ನೀರನ್ನೂ ಕೂಡ ಇನ್ನು ಮುಂದೆ ಬಿಡತಕ್ಕದ್ದು ಇಲ್ಲ ಎನ್ನತಕ್ಕಾಂಥದ್ದನ್ನೂ ಸಹ ಸರ್ಕಾರದ ಮುಖಾಂತರ ಹೇಳಿದ್ದೂ ಕೂಡ ಆಗಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕಾಗೋಡು ತಿಮ್ಮಪ್ಪನವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಅದು ಸರ್ಕಾರದ ಮುಖಾಂತರ ಬಂದಿದೆ. ಈಗಲೂ ಸಹ ಅದನ್ನೇ ಹೇಳುತ್ತಿದ್ದೇವೆ. ಇವತ್ತು ಸದನದಲ್ಲಿರತಕ್ಕ ಎಷ್ಟು ಜನ ಸನ್ಮಾನ್ಯ ಸದಸ್ಯರು ನಿನ್ನೆಯ ದಿವಸ ಕೊನೆಯ ಹಂತದಲ್ಲಿ ಸದನದಲ್ಲಿದ್ದರೋ ಗೊತ್ತಿಲ್ಲ.

ಅಧ್ಯಕ್ಷರು:- ಮಾನ್ಯ ಕಾಗೋಡು ತಿಮ್ಮಪ್ಪನವರು ಸುಮ್ಮನೆ, ಸುಮ್ಮನೆ ನೀವು ಮಾತನಾಡುತ್ತಿದ್ದೀರಿ ಎಂದು ಗಲಾಟೆ ಮಾಡುತ್ತಿದ್ದಾರೆ.

ಶ್ರೀ ಸಿ.ಬೈರೇಗೌಡ:- ಹೌದು.

ಅಧ್ಯಕ್ಷರು:- ಬೈರೇಗೌಡರು ಮಾತನಾಡುತ್ತಿದ್ದಾಗ, ಸ್ನೇಹದಲ್ಲಿ ಸುಮ್ಮನೆ ಇದ್ದು ಬಿಟ್ಟರು ಎನ್ನುವ ಅಪಾದನೆ ಬರುತ್ತದೆ ಎಂದು ಹೇಳಿ ಮಾನ್ಯ ಕಾಗೋಡು ತಿಮ್ಮಪ್ಪನವರು ಈಗ ಇಲ್ಲಿ ಗಲಾಟೆ ಮಾಡುತ್ತಿದ್ದಾರೆ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಸಿ.ಬೈರೇಗೌಡ:- ಮಾನ್ಯ ಸದಸ್ಯರುಗಳು ಸದನ ಬಾವಿಯಲ್ಲಿದ್ದಾಗ ಅವರಿಗೆ ಮಾತನಾಡುವ ಹಕ್ಕು ಇಲ್ಲ.

(ಈ ಹಂತದಲ್ಲಿ ಮತ್ತೊಮ್ಮೆ ಕೆಲವು ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಸಿ. ಬೈರೇಗೌಡ :- ಅಂತಹ ಪರಿಸ್ಥಿತಿ ಬಂದಾಗ, ಯಾರು ಯಾರನ್ನು ಬಾವಿಗೆ ತಳ್ಳುತ್ತಾರೆ

ಎಂಬುದು ಗೊತ್ತಾಗುತ್ತದೆ. ಈಗ ಆ ವಿಚಾರವೆಲ್ಲಾ ಬೇಡ. ಆದಕ್ಕೋಸ್ಕರ ನಾನು ಈ ಹಂತಕ್ಕೆ ನಿಲ್ಲಿಸಿ. ನಾನು ಈ ವಿಷಯದಲ್ಲಿ ಮುಂದಕ್ಕೆ ಹೋಗುವುದಿಲ್ಲ ಎನ್ನತಕ್ಕ ಮಾತನ್ನು ನಾನು ತಮ್ಮ ಮುಂದೆ ಹೇಳಿದ್ದೇನೆ.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ಕುಳಿತಿದ್ದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಅದನ್ನು ನಿಮ್ಮ ತೀರ್ಮಾನಕ್ಕೆ ಬಿಡುತ್ತೇವೆ. ಸರ್ಕಾರ ಈ ವಿಚಾರದಲ್ಲಿ ತಮ್ಮ ಕೊಠಡಿಯಲ್ಲಿ ನಡೆಸತಕ್ಕ ಚರ್ಚೆಗೆ ಅಥವಾ ಆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ತಯಾರಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಿಮ್ಮ ಅಂತಿಮ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ ಎಂಬ ಮಾತನ್ನು ಹೇಳಿ, ತಮಗೆ ವಂದಿಸಿ, ನನ್ನ ಮಾತಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ತಮ್ಮೆಲ್ಲರ ಅಭಿಪ್ರಾಯಗಳನ್ನು ನಾನು ಕೇಳಿದ್ದೇನೆ. ಮಾನ್ಯ ಹಿರಿಯ ಸದಸ್ಯರಾದ ಬಂಗಾರಪ್ಪನವರು ಹೇಳಿದ ಮಾತನ್ನೂ ಕೂಡ ಕೇಳಿದ್ದೇನೆ. ಕೆಲವು ಮುಖಂಡರುಗಳು ಇವತ್ತು ಸದನದಲ್ಲಿ ಇಲ್ಲ. ಆದ್ದರಿಂದ ಈಗ ಸದನವನ್ನು ಮುಂದಕ್ಕೆ ಹಾಕಿ, ನಾಳೆ ಬೆಳಿಗ್ಗೆ ಮತ್ತೆ ಸೇರೋಣ.

ಶ್ರೀ ಜಿ.ಬಿ.ಶಿವಕುಮಾರ್:- ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನನ್ನದೊಂದು ಮನವಿ. ಹೊಸದಾಗಿ ಶಾಸಕರಾಗಿ ಆಯ್ಕೆಯಾಗಿರತಕ್ಕ ಎಲ್ಲಾ ಪಕ್ಷಗಳ ಸದಸ್ಯರ ಪರವಾಗಿ ನಾನು ಒಂದು ಮಾತನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ. ಸತತವಾಗಿ ನಾಲ್ಕನೇ ಬಾರಿಗೆ ಪ್ರಶ್ನೋತ್ತರ ವೇಳೆ ಮುಂದಕ್ಕೆ ಹೋಗಿದೆ. ಬಹಳಷ್ಟು ಉಪಯುಕ್ತವಾದ ಪ್ರಶ್ನೆಗಳನ್ನು ಎಲ್ಲಾ ಪಕ್ಷದ ಸದಸ್ಯರು ಕೇಳಿದ್ದರು.

ಅಧ್ಯಕ್ಷರು:- ದಯವಿಟ್ಟು ಆ ವಿಷಯವನ್ನು ನಾಳೆ ಪ್ರಸ್ತಾಪಿಸಿ. ಸದನವನ್ನು ಈಗ ಮುಂದೂಡಿದ್ದೇನೆ. ಸದನವು ನಾಳೆ ಬೆಳಿಗ್ಗೆ 10.00 ಗಂಟೆಗೆ ಪುನಃ ಸೇರುವುದು.

(ಸದನವು ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಮುಕ್ತಾಯವಾಗಿ ಪುನಃ 1ನೇ ಸೆಪ್ಟೆಂಬರ್ ಮಾಹೆ 1995ರ ಶುಕ್ರವಾರರಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಇಷ್ಟಾ ಚರ್ಚಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)